## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 833 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 09.03.2021 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಆಹಾರ, ಸಾಮಗ್ರಿ, ತರಕಾರಿ ಮತ್ತು ಹಣ್ಣು ವ್ಯಾಪಾರಗಾರರು ಬಳಸುವ ತಕ್ಕಡಿಗಳು ಮತ್ತು ಬಟ್ಟುಗಳು ದೋಷಪೂರಿತವಾಗಿದ್ದು, ಇದರ ಬಗ್ಗೆ ತಪಾಸಣೆ ಮಾಡಿ ಕ್ರಮ ಕೈಗೊಳ್ಳಲು ಇಲಾಖೆಯಲ್ಲಿ ಯಾವ ವ್ಯವಸ್ಥೆ ಇದೆ; | ಆಹಾರ ಸಾಮಗ್ರಿ, ತರಕಾರಿ ಮತ್ತು ಹಣ್ಣು ವ್ಯಾಪಾರಗಾರರು ಬಳಸುವ ತೂಕ ಮತ್ತು ಅಳತೆ ಸಾಧನಗಳ ನಿಖರತೆಯನ್ನು ಖಚಿತಪಡಿಸಿಕೊಂಡು ಪ್ರತಿ ವರ್ಷ ಸತ್ಯಾಪನೆ ಮತ್ತು ಮುದ್ರೆ ಕಾರ್ಯವನ್ನು ಮಾಡಿಸದೇ ಇದ್ದಲ್ಲಿ ತಪಾಸಣೆ ನಡೆಸಿ, ತಪ್ಪಿತಸ್ಥರ ವಿರುದ್ಧ ದಿ ಲೀಗಲ್ ಮೆಟ್ರಾಲಜಿ ಕಾಯಿದೆ 2009ರ ಕಾಲಂ 24 ರಡಿಯಲ್ಲಿ ಮೊಕದ್ದಮೆಯನ್ನು ಹೂಡಿ, ಸದರಿಯವರಿಂದ ಅಭಿಸಂಧಾನ ಶುಲ್ಕವನ್ನು ವಸೂಲು ಮಾಡಲಾಗುತ್ತಿದೆ. |
| (ಆ) | ಬೀದಿ ಬದಿ ವ್ಯಾಪಾರಿಗಳು ಉಪಯೋಗಿಸುವ ತಕ್ಕಡಿ ಮತ್ತು ಬಟ್ಟುಗಳನ್ನು ತಪಾಸಣೆ ಮಾಡಿ ಕ್ರಮ ಕೈಗೊಂಡಿರುವ ಪ್ರಕರಣಗಳು ಎಷ್ಟು;(ಕಳೆದ 2 ವರ್ಷಗಳ ಮಾಹಿತಿ ನೀಡುವುದು) | ಕಳೆದ ಎರಡು ವರ್ಷಗಳಲ್ಲಿ ಬೀದಿ ಬದಿ ವ್ಯಾಪಾರಿಗಳು ಉಪಯೋಗಿಸುವ ತಕ್ಕಡಿ ಮತ್ತು ಬಟ್ಟುಗಳನ್ನು ತಪಾಸಣೆ ಮಾಡಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಂಡಿರುವ ಪ್ರಕರಣಗಳು ಈ ಕೆಳಗಿನಂತಿವೆ. |

| ವರ್ಷ | ನಡೆಸಲಾದ ತಪಾಸಣೆಗಳ ಸಂಖ್ಯೆ | ಹೂಡಲಾದ ಮೊಕದ್ದಮೆಗಳು |
|---|---|---|
| 2018-19 | 19,712 | 8,575 |
| 2019-20 | 35,581 | 10,650 |
| ರಾಜ್ಯದ ಒಟ್ಟು | 55,293 | 19,225 |

| | | |
|---|---|---|
| (ಇ) | ವ್ಯಾಪಾರಗಾರರು/ಪೆಟ್ರೋಲ್ ಬಂಕ್ ಮಾಲೀಕರು ತೂಕ ಮತ್ತು ಅಳತೆಯಲ್ಲಿ ಗ್ರಾಹಕರಿಗೆ ವಂಚಿಸುತ್ತಿದ್ದು, ಇದರ ಬಗ್ಗೆ ಸರ್ಕಾರ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳುವುದೇ? | ವ್ಯಾಪಾರಗಾರರು ತೂಕ ಮತ್ತು ಅಳತೆಯಲ್ಲಿ ಗ್ರಾಹಕರಿಗೆ ಆಗುವ ವಂಚನೆಯನ್ನು ತಡೆಯಲು ಪ್ರತಿ ವರ್ಷ ವ್ಯಾಪಾರಸ್ಥರುಗಳ ತೂಕ ಮತ್ತು ಅಳತೆ ಸಾಧನಗಳ ನಿಖರತೆಯನ್ನು ಖಚಿತಪಡಿಸಿಕೊಂಡು ಪ್ರತಿ ವರ್ಷ ಸತ್ಯಾಪನೆ ಮತ್ತು ಮುದ್ರೆ ಮಾಡಲಾಗುತ್ತಿದೆ ಹಾಗೂ ಕ್ಷೇತ್ರಾಧಿಕಾರಿಗಳು ಆಗಿಂದ್ದಾಗ್ಗೆ ತಪಾಸಣೆ ಕೈಗೊಂಡು ತಪ್ಪಿತಸ್ಥರ ವಿರುದ್ಧ ದಿ ಲೀಗಲ್ ಮೆಟ್ರಾಲಾಜಿ ಕಾಯಿದೆ 2009ರ ಕಲಂ 24 ರಡಿಯಲ್ಲಿ ಕ್ರಮ ಕೈಗೊಂಡು ಮೊಕದ್ದಮೆ ಹೂಡುವುದಲ್ಲದೆ ರಾಜ್ಯಾದ್ಯಂತ ಐದು ತನಿಖಾ ತಂಡಗಳು ಕಾರ್ಯ ನಿರ್ವಹಿಸುತ್ತಿದ್ದು, ಕ್ಷೇತ್ರಾಧಿಕಾರಿಗಳು ನಡೆಸುವ ತಪಾಸಣೆ ಅಲ್ಲದೆ ತನಿಖಾ ತಂಡಗಳು ತಪಾಸಣೆ ನಡೆಸಿ ತಪ್ಪಿತಸ್ಥರ ವಿರುದ್ಧ ಮೊಕದ್ದಮೆ ಹೂಡಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಪೆಟ್ರೋಲ್ ಬಂಕ್ ಮಾಲೀಕರು ಗ್ರಾಹಕರಿಗೆ ಮೋಸ ಮಾಡುತ್ತಿರುವವರ ವಿರುದ್ಧ ದಿ ಲೀಗಲ್ ಮೆಟ್ರಾಲಜಿ ಕಾಯಿದೆ 2009ರ ಕಲಂ 12, 15, 24 ಮತ್ತು 30ರಡಿಯಲ್ಲಿ ಕಾನೂನು ಕ್ರಮಕೈಗೊಂಡು ಮೊಕದ್ದಮೆ ಹೂಡಿ, ಅಭಿಸಂಧಾನ ದಂಡವನ್ನು ವಸೂಲು ಮಾಡಲಾಗುತ್ತಿದೆ ಹಾಗೂ ಅಭಿಸಂಧಾನ ದಂಡವನ್ನು ಭರಿಸಲು ನಿರಾಕರಿಸುವವರ ವಿರುದ್ಧ ಸಂಬಂಧಿಸಿದ ಕ್ಷೇತ್ರವ್ಯಾಪ್ತಿಯ ಕೋರ್ಟ್ ನಲ್ಲಿ ದಾವೆ ಹೂಡಿ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ಆನಾಸ 18 ಕಾಮಾಸೇ 2021 (ಇ-ಆಫೀಸ್)

(ಉಮೇಶ್ ವಿ. ಕತ್ತಿ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು